# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1394 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ |
| ಉತ್ತರಿಸಬೇಕಾದ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕ್ರೈಸ್ ಅಧೀನದ ಶಾಲೆ/ಕಾಲೇಜುಗಳಿಗೆ ಮಂಜೂರಾಗಿರುವ ಪ್ರಾಂಶುಪಾಲರ ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳು ಎಷ್ಟು ಹಾಗೂ ವಿಷಯವಾರು ಉಪನ್ಯಾಸಕ ಹುದ್ದೆಗಳೆಷ್ಟು ವರ್ಷವಾರು ಮಂಜೂರಾದ ಹುದ್ದೆಗಳು ಎಷ್ಟು; (ಆದೇಶದ ಪ್ರತಿ ಒದಗಿಸುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ-521, ಪರಿಶಿಷ್ಟ ವರ್ಗ-148 ಹಾಗೂ ಹಿಂದುಳಿದ ವರ್ಗದ-179 ವಸತಿ ಶಾಲೆಗಳನ್ನು ಸೇರಿ ಒಟ್ಟಾರೆ 848 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುತ್ತವೆ.<br><br>ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ ಮಂಜೂರಾಗಿರುವ ಎ ಮತ್ತು ಬಿ ವೃಂದದ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಹುದ್ದೆಗಳ ವಿವರ ಕೆಳಕಂಡಂತಿದೆ.<br><br>ಕ್ರ ಸಂ / ಹುದ್ದೆ / ಮಂಜೂರಾದ ಸಂಖ್ಯೆ<br>1 / 'ಎ' ವೃಂದದ ಪ್ರಾಂಶುಪಾಲರು / 72<br>2 / 'ಬಿ' ವೃಂದದ ಪ್ರಾಂಶುಪಾಲರು / 754<br>3 / ಉಪನ್ಯಾಸಕರು / 375<br><br>ವಿಷಯವಾರು ಉಪನ್ಯಾಸಕರ ಮಂಜೂರಾದ ಹುದ್ದೆಗಳ ವರ್ಷವಾರು ವಿವರವನ್ನು ಅನುಬಂಧ-01 ರಲ್ಲಿ ನೀಡಲಾಗಿದೆ. |
| ಆ) | ಪ್ರಸ್ತುತ ಖಾಲಿ ಇರುವ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಹುದ್ದೆಗಳು ಎಷ್ಟು; (ವಿವರ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುವ 848 ವಸತಿ ಶಾಲೆ/ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಹುದ್ದೆಗಳ ವಿವರ ಈ ಕೆಳಕಂಡಂತಿದೆ.<br><br>ಕ್ರ. ಸಂ / ಹುದ್ದೆ / ಮಂಜೂರಾದ ಸಂಖ್ಯೆ / ಭರ್ತಿಯಾದ ಹುದ್ದೆಗಳು / ಖಾಲಿ ಇರುವ ಹುದ್ದೆಗಳು<br>1 / 'ಎ' ವೃಂದದ ಪ್ರಾಂಶುಪಾಲರು / 73 / 36 / 37<br>2 / 'ಬಿ' ವೃಂದದ ಪ್ರಾಂಶುಪಾಲರು / 754 / 721 / 33<br>3 / ಉಪನ್ಯಾಸಕರು / 375 / 136 / 239 |

| | | |
|---|---|---|
| ಇ) | ಪ್ರಾಂಶುಪಾಲರ ಗ್ರೂಪ್ 'ಬಿ' ಹುದ್ದೆಗಳಿಗೆ ಯಾವಾಗ ಮುಂಬಡ್ತಿ ನೀಡಲಾಗಿದೆಯೆ, ಯಾವ ವೃಂದದ ಶಿಕ್ಷಕರಿಗೆ ಎಷ್ಟು ಪ್ರಾಂಶುಪಾಲರ ಹುದ್ದೆಗಳಿಗೆ ಮುಂಬಡ್ತಿ ಸಿಕ್ಕಿದೆ; (ಹುದ್ದೆವಾರು ಮುಂಬಡ್ತಿ ಪಡೆದ ಅಂಕಿಅಂಶ ನೀಡುವುದು) | ಪ್ರಾಂಶುಪಾಲರ ಹುದ್ದೆಗೆ ವಸತಿ ಶಾಲೆಗಳ ಶಿಕ್ಷಕರ ವೃಂದದಿಂದ ಮುಂಬಡ್ತಿಗೊಂಡ ಸಿಬ್ಬಂದಿಗಳ ಹುದ್ದೆವಾರು ವಿವರ ಅನುಬಂಧ-02 ರಲ್ಲಿ ನೀಡಲಾಗಿದೆ. |
| ಈ) | ಈ ಸಂಬಂಧ ಯಾವ ದಿನಾಂಕದಂದು ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡೆಸಲಾಗಿದೆ; ಎಷ್ಟು ಶಿಕ್ಷಕರಿಗೆ ಮುಂಬಡ್ತಿ ನೀಡಲಾಗಿದೆ; ಯಾವ ದಿನಾಂಕದಂದು ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗಿದೆ(ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳನ್ವಯ ನೇರ ನೇಮಕಾತಿ ಮೂಲಕ ಶೇಕಡ ಇಪ್ಪತ್ತೈದರಷ್ಟು ಮತ್ತು ಸಂಯೋಜಿತ ಜ್ಯೇಷ್ಠತೆ ಕಮ್ ಮೆರಿಟ್ ಆಧಾರದ ಮೇಲೆ ಶಿಕ್ಷಕರ ವೃಂದದ ಪೈಕಿ ಬಡ್ತಿ ಮೂಲಕ ಶೇಕಡ ಎಪ್ಪತ್ತೈದರಷ್ಟು ಹುದ್ದೆಗಳನ್ನು, ಆಯಾ ವೃಂದದಲ್ಲಿನ ಸೇವಾವಧಿಯ ಆಧಾರದ ಮೇಲೆ ಜ್ಯೇಷ್ಠತೆ ಮೇರೆಗೆ 422 ಶಿಕ್ಷಕರಿಗೆ ಮತ್ತು ಹೆಚ್ಚುವರಿ ಪಟ್ಟಿಯಲ್ಲಿ 42 ಶಿಕ್ಷಕರಿಗೆ ಮುಂಬಡ್ತಿ ನೀಡಲಾಗಿರುತ್ತದೆ.<br>ಉಳಿದ ಇತರ ವೃಂದದ 362 (73 ಹೈ.ಕ. 289 ಉಳಿಕೆ ಮೂಲ ವೃಂದ) ಶಿಕ್ಷಕರನ್ನು ಕೌನ್ಸ್ ಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗಿರುತ್ತದೆ.<br>ಹೆಚ್ಚುವರಿಯಾಗಿ ಕಾಯ್ದಿರಿಸಿದ್ದ 40 ಶಿಕ್ಷಕರುಗಳಿಗೆ ಕೌನ್ಸ್ ಲಿಂಗ್ ಆಯೋಜಿಸಿ 34 ಶಿಕ್ಷಕರಿಗೆ ಪ್ರಾಂಶುಪಾಲರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.<br><br>ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ 45 (13 ಹೈ.ಕ. 32 ಉಳಿಕೆ ಮೂಲ ವೃಂದ) ಶಿಕ್ಷಕರಿಗೆ ಮುಂಬಡ್ತಿ ನೀಡಿ, ಕೌನ್ಸ್ ಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.<br>2025 ರಲ್ಲಿ ಹೆಣ್ಣು ಮಕ್ಕಳ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗೆ ಮಹಿಳಾ ಶಿಕ್ಷಕ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>ಅದರಂತೆ ಹೆಣ್ಣು ಮಕ್ಕಳ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗೆ ಮಹಿಳಾ ಶಿಕ್ಷಕ ವೃಂದದಿಂದ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ಆಯೋಜಿಸಲು ಕ್ರಮವಹಿಸಲಾಗಿ, ಏತನ್ಮಧ್ಯೆ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ಕಂಪ್ಯೂಟರ್ ಶಿಕ್ಷಕರು ಹೊರಡಿಸಿರುವ ವೃಂದ ಮತ್ತು ನೇಮಕಾತಿ ವಿನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ನ್ಯಾಯಾಲಯ ಅಂತಿಮ ಆದೇಶದಂತೆ ಮುಂದಿನ ಕ್ರಮವಹಿಸಲಾಗುವುದು. |

| | | |
|---|---|---|
| ಉ) | 2011 ರಿಂದ ಇದುವರೆಗೆ ಉಪನ್ಯಾಸಕ ಹುದ್ದೆಗೆ ಮುಂಬಡ್ತಿ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಯಾವ ಕಾಲಮಿತಿಯೊಳಗೆ ಉಪನ್ಯಾಸಕ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗುವುದು? (ವಿವರ ನೀಡುವುದು) | ನೀಡಿರುವುದಿಲ್ಲ.<br><br>ಉಪನ್ಯಾಸಕರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ 2016 ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರ ನೇಮಕಾತಿ ಮಾಡಲಾಗಿರುತ್ತದೆ.<br><br>2016-17ನೇ ಆಯವ್ಯಯದ ಘೋಷಣೆಯಂತೆ 30 ವಸತಿ ಶಾಲೆಗಳನ್ನು 11 ಮತ್ತು 12ನೇ ತರಗತಿಗಳಿಗೆ ಉನ್ನತೀಕರಿಸಿರುವ ವಸತಿ ಕಾಲೇಜುಗಳಿಗೆ ಅವಶ್ಯಕ ಬೋಧಕ/ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿ,ಆರ್ಥಿಕ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: ಸಕಇ 154 ಮೊದೇಶಾ 2017 ದಿನಾಂಕ:30.06.2022 ರಲ್ಲಿ 10 ವಸತಿ ಶಾಲೆಗಳಿಗೆ ಮಾತ್ರ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಕಇ 305 ಎಂಡಿಎಸ್ 2022, ದಿನಾಂಕ:23.07.2025 ರಲ್ಲಿ 20 ವಸತಿ ಕಾಲೇಜುಗಳಿಗೆ ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.<br><br>ಅಧಿಸೂಚನೆ ಸಂಖ್ಯೆ:ಸಕಇ-ಎಂಡಿಎಸ್ 448/2022 ದಿನಾಂಕ:10.03.2025 ರಂದು ಹೊರಡಿಸಿರುವ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ 2025 ರಲ್ಲಿ ಉಪನ್ಯಾಸಕರ ಹುದ್ದೆಯ ನೇಮಕಾತಿ ಪ್ರಕ್ರಿಯೆಯನ್ನು ಶೇ.75 ರಷ್ಟು ವಸತಿ ಶಾಲೆಗಳ ಶಿಕ್ಷಕ ವೃಂದದಿಂದ ಮುಂಬಡ್ತಿ ಮೂಲಕ ಶೇ.25 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸೂಚಿಸಲಾಗಿರುತ್ತದೆ. ಅದರಂತೆ, ಖಾಲಿ ಇರುವ ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ನೀಡಲು ಕಾರ್ಯನಿರ್ವಹಣಾ ವರದಿಗಳು ಮತ್ತು ಇತರೆ ಅವಶ್ಯಕ ದಾಖಲೆಗಳನ್ನು ಜೇಷ್ಠತೆಯ ಆಧಾರದ ಮೇಲೆ ಸಲ್ಲಿಸುವಂತೆ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿರುತ್ತದೆ. ವರದಿಗಳು ಸ್ವೀಕೃತವಾದ ನಂತರ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು. |

ಸಕಇ 204 ಎಂಡಿಎಸ್ 2025

(ಡಾ.ಹೆಚ್.ಸಿ ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು.